| ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು |
|---|

**ಎಸ್.ಸಿ. 116/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ದೀಪು | ಪ್ರಮಾಣ ಮಾಡಿದ ದಿನಾಂಕಃ | |
| ತಂದೆಯ ಹೆಸರು | ಃ ಕೃಷ್ಣಮೂರ್ತಿ | 14.02.2023 | |
| ವಯಸ್ಸು | ಃ 38 ವರ್ಷ | | |
| ವೃತ್ತಿ | ಃ ಖಾಸಗಿ ಕೆಲಸ | ಪಿಡಬ್ಲ್ಯೂ ಃ | 11 |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ | 08 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

**ಪ್ರಾಸಾ-10 ನನ್ನ ಹೆಂಡತಿ. ನನಗೆ ಈ ಪ್ರಕರಣದ ಆರೋಪಿಗಳ ಪರಿಚಯ ಇಲ್ಲ. ಮೃತ ಚೆನ್ನಸ್ವಾಮಿ ನನ್ನ ಹೆಂಡತಿಯ ತಮ್ಮ, ನನ್ನ ಭಾವಮೈದ ಈಗ 4 ವರ್ಷದ ಹಿಂದೆ ಗಲಾಟೆಯಾಗಿ ಮೃತಪಟ್ಟಿದ್ದಾನೆ ಅಂತ ಗೊತ್ತಾಯಿತು. ಎಲ್ಲಿ ಮತ್ತು ಯಾರು ಗಲಾಟೆ ಮಾಡಿ ಕೊಲೆ ಮಾಡಿದ್ದರು ಅಂತ ಗೊತ್ತಾಗಲಿಲ್ಲ. ನನ್ನ ಭಾವಮೈದುನನ ಶವವನ್ನು ಗೋಪಾಲಗೌಡ ಆಸ್ಪತ್ರೆಯಲ್ಲಿ ನೋಡಿದ್ದೆ. ಪೊಲೀಸರು ಆ ವೇಳೆಯಲ್ಲಿ ನನ್ನನ್ನು ವಿಚಾರಣೆ ಮಾಡಿಲ್ಲ. ಈಗ ತೋರಿಸಿದ ನಿಪಿ-9ರಲ್ಲಿ ನನ್ನ ರುಜು ಇರುತ್ತದೆ. ಅದನ್ನು ನಿಪಿ-9(ಬಿ) ಎಂದು ಗುರುತಿಸಿದೆ. ಸದರಿ ಸಹಿಯನ್ನು ಗೋಪಾಲಗೌಡ ಆಸ್ಪತ್ರೆಯಲ್ಲಿ ಪೊಲೀಸರು ಪಡೆದುಕೊಂಡಿದ್ದಾರೆ. ಶವ ಸಾಗಿಸಲು ಪೊಲೀಸರು ಪಡೆದುಕೊಂಡಿದ್ದರು. 3ನೇ ಆರೋಪಿಯಿಂದ ಚಾಕುವನ್ನು ಅಮಾನತ್ತುಪಡಿಸಿಕೊಳ್ಳುವಾಗ ನಾನು ಹಾಜರಿರಲಿಲ್ಲ. ಪೊಲೀಸರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ. ನಿಪಿ-10ರಲ್ಲಿ ಇರುವ ರುಜು ನನ್ನದೇ ಇರುತ್ತದೆ. ಅದನ್ನು ನಿಪಿ-10(ಬಿ) ಎಂದು ಗುರುತಿಸಿದೆ. ಸದರಿ ದಾಖಲೆಗೆ ನಾನು ನಜರಾಬಾದ್ ಪೊಲೀಸ ಠಾಣೆಯಲ್ಲಿ ರುಜು ಮಾಡಿದ್ದೇನೆ. ಯಾವ ಕಾರಣಕ್ಕಾಗಿ ರುಜು ಮಾಡಿದ್ದೇನೆ ಅಂತ ಗೊತ್ತಿಲ್ಲ.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೊಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

2. ನ್ಯಾಯಾಲಯದೆದುರು ಹಾಜರಿರುವ ಆರೋಪಿಗಳು ಚಾಕು ಮತ್ತು ಕೈಗಳಿಂದ ನನ್ನ ಭಾವಮೈದುನನ ಮೇಲೆ ಹಲ್ಲೆ ಮಾಡಿದ್ದರಿಂದ ಆತ ಮೃಪಟ್ಟಿದ್ದಾನೆ ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಶವ ಶನಿಖಾ ಕಾಲದಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ "ದಿನಾಂಕ 11.02.2019ರಂದು ರಾತ್ರಿ 10ಃ15 ಗಂಟೆ ಸಮಯದಲ್ಲಿ ........ ಸಾವಿಗೆ ಕಾರಣವನ್ನು ತಿಳಿಯಬೇಕೆಂದು ಕೋರುತ್ತೇನೆ" ಅಂತ ನಿಪಿ-6(ಇ) ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

3. ದಿನಾಂಕ 15.02.2019ರಂದು ಪೊಲೀಸರು ನಿಪಿ-10ರಂತೆ ಒಂದು ನೋಟೀಸನ್ನು ಕೊಟ್ಟು ನನ್ನನುನ ಠಾಣೆಗೆ ಕರೆಸಿಕೊಂಡರು ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ 3ನೇ ಆರೋಪಿ ಅಲ್ಲಿ ಇದ್ದರು ಎಂದರೆ ಸರಿಯಲ್ಲ. ನಂತರ 3ನೇ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆ ಪ್ರಕಾರ ನನ್ನನ್ನು ಮತ್ತು ಚಾಸಾ-11 ಹಾಗೂ ಪೊಲೀಸರನ್ನು ಗಿರಿಯಾಬೋವಿ ಪಾಳ್ಯದ ಮೈದಾನದ ಬಳಿ ಒಂದು ಮರದ ಪೊದೆಯ ಒಳಗೆ ಇಟ್ಟಿದ್ದ ಒಂದು ಚಾಕುವನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ನಮ್ಮ ಎದುರಿಗೆ ಅಮಾನತ್ತುಪಡಿಸಿಕೊಂಡು ನಿಪಿ-9ರಂತೆ ಮಹಜರ ಬರೆದು ಓದಿ ಹೇಳಿ ಅಲ್ಲಿಯೇ ನನ? ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ನಾವು ಈಗ ಆರೋಪಿಗಳ ಜೊತೆ ರಾಜೀ ಮಾಡಿಕೊಂಡಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆಃ ಇಲ್ಲ

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

ಓ ಹೇ ಕೇ ಸ ಇ ಎ ಒ.,

**14.02.2023.**

[ ಜಿ.ಎಸ್. ಸಂಗ್ರೇಶಿ ]
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.